**<u>ಸಾಕ್ಷಿಯನ್ನು ದಿನಾಂಕಃ 04-04-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದಃ</u>**

ನನಗೆ ಮೃತ ವಾದಿಯಾದ ಕುಸುಮ ಬಿಗರಾಗಬೇಕು. ನನ್ನ ಊರು ಹಾರಕನಾಳು ಇರುವುದು. ಮೃತ ವಾದಿಯ ಗಂಡನ ಹೆಸರು ನನಗೆ ನೆನಪಿರುವುದಿಲ್ಲ. ನನಗೆ ವಾದಿಯ ಗಂಡನ ಕುಟುಂಬಸ್ಥರ ಪರಿಚಯ ಇರುವುದಿಲ್ಲ. ವಾದಿಯ ಗಂಡನ ಕುಟುಂಬದವರಿಗೆ ಚಿಗಟೇರಿ, ಗಜಾಪುರ, ಬೆನ್ನೆಹಳ್ಳಿ ಗ್ರಾಮಗಳಲ್ಲಿ 3 ಹೊಲ, 1 ಕಣ ಹಾಗೂ 1 ಮನೆ ಇರುವುದು. ಸದರಿ ಜಮೀನುಗಳ ಸರ್ವೇ ನಂಬರ್ ಮತ್ತು ಮನೆಗಳ ಡೋರ್ ನಂಬರುಗಳು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಸದರಿ ನಂಬರುಗಳನ್ನು ಬರೆಸಿರುವುದಿಲ್ಲ. ಕುಸುಮರವರ ಆರೋಗ್ಯ ಚೆನ್ನಾಗಿತ್ತು. ಅವರಿಗೆ ಯಾವುದೇ ರೋಗವಿರಲಿಲ್ಲ. ಮೃತಪಡುವ ಕಾಲಕ್ಕೆ ಆಕೆಗೆ ಅಂದಾಜು 55 ವರ್ಷ ವಯಸ್ಸಾಗಿತ್ತು. ಯಾವ ಕಾರಣಕ್ಕಾಗಿ ಕುಸುಮಾ ರವರು ಮೃತಪಟ್ಟರು ಎಂದು ನನಗೆ ಗೊತ್ತಿರುವುದಿಲ್ಲ. ಆಕೆಯ ಮುಂಚೆ ಆಕೆಯ ಗಂಡ ತೀರಿಕೊಂಡಿದ್ದರು.

ಆಕೆಯ ಗಂಡ ಯಾವಾಗ ತೀರಿಕೊಂಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಕುಸುಮಾರಿಗೆ ನೈಸರ್ಗಿಕವಾಗಿ ಯಾರಾರು ವಾರಸುದಾರರು ಇರುವರು ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಮರುಳ ಸಿದ್ದಪ್ಪನ ಪರಿಚಯ ಇರುವುದಿಲ್ಲ. ಮರುಳ ಸಿದ್ದಪ್ಪನವರು ಕುಸುಮಾರವರ ತಂಗಿಯ ಗಂಡ ಎಂದು ಆಕೆ ನನಗೆ ಹೇಳಿದ್ದರು. ಸದರಿ ಮರುಳ ಸಿದ್ದಪ್ಪನವರು ಬೆನಕನಹಳ್ಳಿ ಗ್ರಾಮದವರು. ಹಾರಕನಾಳು ಮತ್ತು ಬೆನಕನಹಳ್ಳಿ ಇವು ಕೂಡ್ಲಿಗಿ ತಾಲ್ಲೂಕಿನ ಉಜ್ಜನಿ ಕಂದಾಯ ಹೋಬಳಿಗೆ ಸೇರಿದವು ಎಂದರೆ ಸರಿ. ನಮ್ಮ ಊರಿನಿಂದ ಬೆನಕನಹಳ್ಳಿಗೆ 3-4 ಕಿ.ಮೀ ಆಗಬಹುದು. ಕುಸುಮಾರವರ ಊರಾದ ಕಂದಗಲ್ ಇದು ದಾವಣಗೆರೆ ಜಿಲ್ಲೆ ಮತ್ತು ತಾಲೂಕಿಗೆ ಒಳಪಡುತ್ತದೆ. ನಮ್ಮೂರಿನಿಂದ ಕಂದಗಲ್ಲಿಗೆ 20 ರಿಂದ 30 ಕಿ.ಮೀ. ಆಗುವುದು. ನಮ್ಮೂರಿನಿಂದ ಕಂದಗಲ್ಲಿಗೆ ಹೋಗಬೇಕಾದರೆ ದಾವಣಗೆರೆಯಿಂದ ಹೋಗಬೇಕಾಗುತ್ತದೆ ಎಂದರೆ ಸರಿ. ನಮ್ಮೂರಿನಿಂದ ದಾವಣಗೆರೆ 48 ಕಿ.ಮೀ. ಇದೆ ಎಂದರೆ ಸರಿ. ಅಲ್ಲಿಂದ ಕಂದಗಲ್ಲಿಗೆ 19 ಕಿ.ಮೀ ಇದೆ ಎಂದರೆ ಸರಿ.

ತನಗೆ ಸಂತಾನವಿಲ್ಲದ ಕಾರಣ ನನ್ನ ಹೆಸರಿನಲ್ಲಿರುವ ಆಸ್ತಿಗಳನ್ನು ನನ್ನ ತಂಗಿಯ ಗಂಡನ ಹೆಸರಿಗೆ ವಿಲ್ ಬರೆಯುವುದಾಗಿ ಕುಸುಮಾ ಹೇಳಿದ್ದರು. ವಿಲ್ ಬರೆಯುವ ಒಂದು ದಿನದ ಮುಂಚಿತವಾಗಿ ನನ್ನನ್ನು ಮತ್ತು ಕಲ್ಲಪ್ಪನನ್ನು ಬರುವಂತೆ ಫೋನ್ ಮುಖಾಂತರ ತಿಳಿಸಿದ್ದರು. ಇಬ್ಬರಿಗೂ ಫೋನ್ ಮಾಡಿದ್ದರು. ಕಲ್ಲಪ್ಪ ಹಾಗೂ ನಾನು ಬೇರೆ ಬೇರೆ ಕುಲಕ್ಕೆ ಸೇರಿರುತ್ತೇವೆ. ಕುಸುಮಾರವರು ಲಿಂಗಾಯತ್ ಸಮುದಾಯಕ್ಕೆ ಸೇರಿದವರು

ಎಂದರೆ ಸರಿ. ಅವರು ನನ್ನ ಸಂಬಂಧಿಕರಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಸಂಬಂಧಿಕರು ಕಂದಗಲ್ಲಿನಲ್ಲಿವರು ಎಂದು ನುಡಿದರು. ನಾನು ಮತ್ತು ಕಲ್ಲಪ್ಪ ವಿಲ್ ಬರೆಸುವ ಸಲುವಾಗಿ ಹರಪನಹಳ್ಳಿ ಉಪನೊಂದಣಿ ಕಛೇರಿಗೆ ಬೆಳಗ್ಗೆ 10 ಗಂಟೆ ಸುಮಾರಿಗೆ ಬಂದೆವು. ಆಗ ಮರುಳ ಸಿದ್ದಪ್ಪ ಬಂದಿರಲಿಲ್ಲ. ಆ ದಿನ ಮರುಳ ಸಿದ್ದಪ್ಪ ನಮ್ಮನ್ನು ಬೇಟಿ ಮಾಡಿರುವುದಿಲ್ಲ. ಮರುಳ ಸಿದ್ದಪ್ಪ ನನಗೆ 2-3 ವರ್ಷಗಳಿಂದ ಪರಿಚಯ ಇರುವರು.

ನಾವು ನೊಂದಣಿ ಕಛೇರಿಗೆ ಬಂದ ನಂತರ ಕುಸುಮಾ ವಿಲ್ಲನ್ನು ಬರೆಸಿರುವರು. ವಿಲ್ಲನ್ನು ನೊಂದಣಿ ಕಛೇರಿಯಲ್ಲಿ ಬಸವರಾಜಪ್ಪರವರು ಬರೆದಿರುವರು. ವಿಲ್ಲಿಗೆ ಪ್ರಥಮವಾಗಿ ಕುಸುಮಾರವರು ಸಹಿ ಮಾಡಿರುವರು. ನಂತರ ಕಲ್ಲಪ್ಪ, ತದನಂತರ ನಾನು ಸಹಿ ಮಾಡಿರುವೆನು. ನಂತರ ಬಸವರಾಜಪ್ಪನವರು ಸಹಿ ಮಾಡಿರುವರು. ವಿಲ್ 11 ಗಂಟೆ ಸುಮಾರಿಗೆ ನೊಂದಣಿಯಾಗಿರುವುದು. ವಿಲ್ ಬರೆಯಲು ಮಾಹಿತಿಯನ್ನು ಕುಸುಮಾರವರು ನೀಡಿರುವರು. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿವೆ. ಸಂತಾನ ಇಲ್ಲದ ಕಾರಣ ತಂಗಿಯ ಗಂಡನಿಗೆ ವಿಲ್ ಮಾಡುತ್ತಿದ್ದೇನೆ ಎಂದು ಸದರಿ ವಿಲ್ಲಿನಲ್ಲಿ ಉಲ್ಲೇಖ ಇರುತ್ತದೆ. ಆ ರೀತಿ ಯಾವುದೇ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ಮರುಳಸಿದ್ದಪ್ಪ ಏನು ಕೆಲಸ ಮಾಡುವರು ಎಂದು ನನಗೆ ಗೊತ್ತಿಲ್ಲ.

ಮರುಳಸಿದ್ದಪ್ಪ ನನ್ನ ವಿಶ್ವಾಸಿಕರು ಎಂದರೆ ಸರಿಯಲ್ಲ. ಮರುಳಸಿದ್ದಪ್ಪ ಕೂಡ್ಲಿಗಿ ನ್ಯಾಯಾಲಯದಲ್ಲಿ ಪ್ರಾಕ್ಟಿಸ್ ಮಾಡುವ ವಕೀಲರು ಎಂದರೆ ಇರಬಹುದು. ನನಗೂ ಅವರಿಗೂ ಸುಮಾರು ವರ್ಷಗಳಿಂದ ಪರಿಚಯವಿದ್ದು, ವಿಶ್ವಾಸ ಇರುವುದು ಎಂದರೆ ಬಹಳ ವಿಶ್ವಾಸ ಇರುವುದಿಲ್ಲ. ಬಹಳ ವರ್ಷಗಳಿಂದ ಪರಿಚಯ ಎಂದರೆ ಇರಬಹುದು. ವಿಲ್ ಬರೆಸಲಾಗಿದೆ ಎಂದು ಹೇಳಲಾದ ದಿನದಂದು ಮರುಳಸಿದ್ದಪ್ಪನವರು ನನ್ನನ್ನು ಹಾಗೂ ಕಲ್ಲಪ್ಪನನ್ನು ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ನನಗೆ ಕುಸುಮಾರವರು ಪರಿಚಯವೇ ಇಲ್ಲ ಎಂದರೆ ಸರಿಯಲ್ಲ. ನನ್ನ ಯಾವುದೇ ಸಂಬಂಧಿಕರು ಕಂದಗಲ್ಲು ಗ್ರಾಮದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಮರುಳಸಿದ್ದಪ್ಪ ನವರ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕುಸುಮಾರವರು ಬಹಳ ವರ್ಷಗಳಿಂದ ಬಿಪಿ ಹಾಗೂ ಡಯಾಬಿಟಿಸ್ ಪೇಷೆಂಟ್ ಅಗಿದ್ದರು ಎಂದರೆ ಸರಿಯಲ್ಲ. ವಿಲ್ ಬರೆಯಲಾಗಿದೆ ಎಂದು ಹೇಳುವ ಕಾಲಕ್ಕೆ ಅಕೆ ದೈಹಿಕವಾಗಿ ಜರ್ಜರಿತರಾಗಿದ್ದರು ಎಂದರೆ ಸರಿಯಲ್ಲ. ಶುಗರ್ ಹೆಚ್ಚಾದ್ದ ಕಾರಣ ಆ ಕಾಲಕ್ಕೆ ಆಕೆಗೆ ಎರಡು ಕಣ್ಣುಗಳು ಸರಿಯಾಗಿ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹಿತ ಆಕೆ ಆರೋಗ್ಯದಿಂದ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲ್ಲನ್ನು ಮರುಳಸಿದ್ದಪ್ಪನವರ ಉಸ್ತುವಾಗಿಯಲ್ಲಿ

ಬರೆಯಲಾಗಿದೆ ಎಂದರೆ ಸರಿಯಲ್ಲ.  ಮರುಳಸಿದ್ದಪ್ಪನವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**3 ಮತ್ತು 4ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುವರು.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ  ಬೆರಳಚ್ಚು  ಮಾಡಲಾಯಿತು.)

**ಓ   ಹೇ   ಕೇ   ಸರಿಯಿದೆ.**

04-04-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ.  ಹರಪನಹಳ್ಳಿ**